# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ-583105.

**ಕುಲಸಚಿವರು (ಮೌಲ್ಯಮಾಪನ)** **ದೂರವಾಣಿ: 08392-241011**

ಸಂಖ್ಯೆ: ವಿಶ್ರೀಕೃವಿಬ/ಸ್ನಾತಕ/ಪರೀಕ್ಷಾ-ಅಧಿಸೂಚನೆ/2019-20/೪೦೦(ಎ) ದಿನಾಂಕ: 17/10/2019

## ಪರೀಕ್ಷಾ ಅಧಿಸೂಚನೆ

**ವಿಷಯ:** 2019ರ ನವೆಂಬರ್/ಡಿಸೆಂಬರ್ ತಿಂಗಳಿನಲ್ಲಿ ಜರುಗಲಿರುವ ಸ್ನಾತಕ ಪದವಿಯ 1ನೇ ಸೆಮಿಸ್ಟರ್ ರೆಗ್ಯೂಲರ್ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:** 1) ಶೈಕ್ಷಣಿಕ ವೇಳಾಪಟ್ಟಿಯ ಅಧಿಸೂಚನೆ ಸಂಖ್ಯೆ. ವಿಶ್ರೀಕೃವಿಬ/ವಿಮವಿ/ಶೈವೇ/2019-20/534, ದಿನಾಂಕ: 30.05.2019.

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 21.09.2019

****

2019ರ ನವೆಂಬರ್/ಡಿಸೆಂಬರ್ ತಿಂಗಳಿನಲ್ಲಿ ಜರುಗಲಿರುವ ಸ್ನಾತಕ ಪದವಿಯ 1ನೇ ಸೆಮಿಸ್ಟರ್ ರೆಗ್ಯೂಲರ್ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ, ಶುಲ್ಕ ಪಾವತಿಸುವ ದಿನಾಂಕ ಹಾಗೂ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕಗಳು ಈ ಕೆಳಗಿನಂತಿವೆ.

| ಪ್ರಾಯೋಗಿಕ/ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕಗಳ ವಿವರ |
|---|
| 1. ಪ್ರಾಯೋಗಿಕ ಪರೀಕ್ಷೆಗಳು: ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳಿಗಿಂತ ಮೊದಲೇ ನಡೆಸಲಾಗುವುದು. |
| |

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು(ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ದಿನಾಂಕಗಳು | | |
|---|---|---|
| 1. | ದಂಡ ಶುಲ್ಕ ವಿಲ್ಲದೆ | 19.10.2019 ರಿಂದ 25.10.2019 |
| 2. | ದಂಡ ಶುಲ್ಕ ಪ್ರತಿ ದಿನಕ್ಕೆ ರೂ. 100/- ರಂತೆ | 26.10.2019 ರಿಂದ 28.10.2019 |
| 3. | ದಂಡ ಶುಲ್ಕ ಪ್ರತಿ ದಿನಕ್ಕೆ ರೂ. 500/- ರಂತೆ | 30.10.2019 ರಿಂದ 31.10.2019 |

**: ಶುಲ್ಕದ ವಿವರಗಳು :**

| ಕ್ರ. ಸಂ. | ವಿವರಣೆ | ಬಿ.ಎ/ ಬಿ.ಕಾಂ/ ಬಿ.ಕಾಂ ವೊಕೇಷನಲ್ /ಬಿಎಸ್‌ಡಬ್ಲ್ಯೂ | ಬಿ.ಎಸ್ಸಿ / ಬಿ.ಎಸ್ಸಿ ಬಯೋಟೆಕ್ನಾಲಜಿ | ಬಿ.ಬಿ.ಎ/ಬಿ.ಬಿ.ಎಂ/ಬಿ.ಸಿ.ಎ/ ಬಿ.ಎಸ್ಸಿ. ಗಾರ್ಮೆಂಟ್ಸ್/ಬಿ.ಹೆಚ್.ಎಂ/ ಬಿ.ಪಿ.ಎಡ್./ ಬಿ.ಎಎಸ್‌ಎಲ್‌ಪಿ/ ಎಂ.ಬಿ.ಎ (ಇಂಟಿಗ್ರೇಟೆಡ್) |
|---|---|---|---|---|
| 1. | ಪ್ರತಿ ಸೆಮಿಸ್ಟರ್ ಪರೀಕ್ಷೆಗಳಿಗೆ | ರೂ. 902.00 | ರೂ. 1,045.00 | ರೂ. 1,182.00 |
| 2. | ಪ್ರಾಯೋಗಿಕ ಪರೀಕ್ಷೆಯ ಪ್ರತಿ ಪತ್ರಿಕೆಗೆ | ರೂ. 121.00 | ರೂ. 121.00 | ರೂ. 121.00 |
| 3. | ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | ರೂ. 143.00 | ರೂ. 143.00 | ರೂ. 143.00 |

**ಸೂಚನೆ:**

ಎಲ್ಲಾ ವಿದ್ಯಾರ್ಥಿಗಳು ಅರ್ಜಿ ಪರಿಶೀಲನಾ ಶುಲ್ಕ ರೂ.05/- ಆಯಾ ಕಾಲೇಜುಗಳಲ್ಲಿ ಪಾವತಿಸತಕ್ಕದ್ದು.

ಪು.ತಿ.ನೋ...

**: ಎಲ್ಲಾ ಪ್ರಾಂಶುಪಾಲರುಗಳು ಹಾಗೂ ವಿದ್ಯಾರ್ಥಿಗಳಿಗೆ ಸೂಚನೆ :**

1. ವಿದ್ಯಾರ್ಥಿಗಳು ಆನ್‌ಲೈನ್ (Online) ಮುಖಾಂತರ ಅರ್ಜಿ ಸಲ್ಲಿಸಲು student.logisys.net.in/vskub ನಲ್ಲಿ login ಆಗಿ ನೊಂದಣಿ ಸಂಖ್ಯೆ, ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿದ ನಂತರ ಶುಲ್ಕದ ವಿವರಗಳುಳ್ಳ ಅರ್ಜಿ ಮುದ್ರಿಸಿ ಅಂಚೆ ಕಛೇರಿಯಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ತಕ್ಷಣ ವಿದ್ಯಾರ್ಥಿಗಳು ಮಹಾವಿದ್ಯಾಲಯಗಳಲ್ಲಿ ಸಲ್ಲಿಸಬೇಕು.
2. ನಿಗದಿತ ಶುಲ್ಕವನ್ನು (ಮುದ್ರಿತ ಚಲನ್‌ನಲ್ಲಿರುವಂತೆ) ಆನ್‌ಲೈನ್ ಚಲನ್‌ನೊಂದಿಗೆ ಯಾವುದೇ ಅಂಚೆ ಕಛೇರಿಯಲ್ಲಿ ನೇರವಾಗಿ ಪಾವತಿಸುವುದು.
3. SC/ST ಹಾಗೂ OBC ಅಭ್ಯರ್ಥಿಗಳು (ಸರ್ಕಾರಿ ಆದೇಶಗಳನ್ನು ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ಅಭ್ಯರ್ಥಿಗಳು) ಪ್ರವರ್ಗ-1, 2ಎ, 2ಬಿ, 3ಎ, 3ಬಿ ವಿದ್ಯಾರ್ಥಿಗಳು ವಿನಾಯಿತಿ ಶುಲ್ಕವನ್ನು ಪಾವತಿಸಲು ಹಾಗೂ ಇತರೆ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಈ ಬಗ್ಗೆ ಎಲ್ಲಾ ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು SC/ST ಹಾಗೂ OBC ವಿದಾರ್ಥಿಗಳ ಆದಾಯ ವಿನಾಯಿತಿಯನ್ನು ಪರಿಗಣಿಸುವ ಮುನ್ನ ಆದಾಯ ಮಿತಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸೂಕ್ತವಾಗಿ ಪರಿಶೀಲಿಸಿ ಆದಾಯ ಮಿತಿಗೆ ಒಳಪಡುವ ವಿದ್ಯಾರ್ಥಿಗಳಿಗೆ ಮಾತ್ರ ವಿನಾಯಿತಿ ಶುಲ್ಕದ ಚಲನ್ ಅನ್ನು ಪರಿಗಣಿಸತಕ್ಕದ್ದು. ಆದಾಯ ಮಿತಿ ನಿಗಧಿತ ಮೊತ್ತಕ್ಕಿಂತ ಹೆಚ್ಚಿಗೆ ಇದ್ದ ಪಕ್ಷದಲ್ಲಿ, ಅಂತಹ ಚಲನ್‌ಗಳನ್ನು ಪರಿಗಣಿಸಕೂಡದೆಂದು ಈ ಮೂಲಕ ತಿಳಿಸಲಾಗಿದೆ.
4. SC/ST ಹಾಗೂ ಇನ್ನುಳಿದ OBC/LIG ವಿದ್ಯಾರ್ಥಿಗಳು (ಸರ್ಕಾರಿ ಆದೇಶಗಳನ್ವಯ ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ವಿದ್ಯಾರ್ಥಿಗಳು) ರೆಗ್ಯೂಲರ್ (Freshers) ವಿದ್ಯಾರ್ಥಿಗಳು ಅಂಕಪಟ್ಟಿ ಶುಲ್ಕ ರೂ. 143/-ನ್ನು ಮಾತ್ರ ಪಾವತಿಸಬೇಕು. ಆದರೆ ಸದರಿ ವರ್ಗದ ಪುನರಾವರ್ತಿತ (Repeater) ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಇರುವುದಿಲ್ಲ. ಅವರು ಪೂರ್ಣ ಶುಲ್ಕ ಭರಿಸಬೇಕು. ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು ಸೆಮಿಸ್ಟರ್‌ವಾರು ಪ್ರತ್ಯೇಕವಾಗಿ ಶುಲ್ಕವನ್ನು ಪಾವತಿಸತಕ್ಕದ್ದು.
5. ಸರ್ಕಾರ ನಿಗದಿಪಡಿಸಿದ ಆದಾಯದ ಮಿತಿಯೊಳಗಿರುವ ಶುಲ್ಕ ವಿನಾಯಿತಿ ಪಡೆದಿರುವ SC/ST ಹಾಗೂ ಇನ್ನುಳಿದ OBC/LIG ವಿದ್ಯಾರ್ಥಿಗಳ ವ್ಯತ್ಯಾಸ ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಮಂಜೂರಾತಿ ಪಡೆದ ನಂತರ ಆಯಾ ಮಹಾವಿದ್ಯಾಲಯದ ಪ್ರಾಂಶುಪಾಲರು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಶುಲ್ಕ ವಿನಾಯಿತಿ ಮೊತ್ತ ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡುವಲ್ಲಿ ತಪ್ಪಿದಲ್ಲಿ ಅದಕ್ಕೆ ಆಯಾ ಮಹಾವಿದ್ಯಾಲಯಗಳ ಪ್ರಾಂಶುಪಾಲರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.
6. ಪರೀಕ್ಷಾ ಶುಲ್ಕದ ಅಧಿಸೂಚನೆಯನ್ವಯ ಪರೀಕ್ಷೆಗೆ ಅರ್ಜಿಸಲ್ಲಿಸುವ ಪುನರಾವರ್ತಿತ (Repeater) ವಿದ್ಯಾರ್ಥಿಗಳು ಸೆಮಿಸ್ಟರ್‌ವಾರು ಪ್ರತ್ಯೇಕವಾಗಿ ಶುಲ್ಕವನ್ನು ಪಾವತಿಸತಕ್ಕದ್ದು.
7. ಪರೀಕ್ಷಾ ಶುಲ್ಕ ಪಾವತಿಸುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದ ಜೊತೆಗೆ ಪೋಸ್ಟಲ್ ಚಾರ್ಜ್ ರೂ. 20 ಮತ್ತು ತೆರಿಗೆ ಜಿ.ಎಸ್.ಟಿ ರೂ. 05 ಒಟ್ಟು 25 ರೂಪಾಯಿಯನ್ನು ಪಾವತಿಸತಕ್ಕದ್ದು.
8. ಆಂತರಿಕ ಅಂಕಗಳನ್ನು ಆನ್‌ಲೈನ್ ಮುಖಾಂತರ ದಿನಾಂಕ: 22.10.2019ರ ಒಳಗಾಗಿ ಸಲ್ಲಿಸತಕ್ಕದ್ದು, ನಂತರ ಬಂದ ಆಂತರಿಕ ಅಂಕಪಟ್ಟಿಗಳನ್ನು ಯಾವುದೇ ಕಾರಣಕ್ಕೆ ಸ್ವೀಕರಿಸಲಾಗುವುದಿಲ್ಲ.
9. **ಯಾವುದೇ ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆ ಮತ್ತು ವಿಷಯಗಳ ಆಯ್ಕೆಗಳನ್ನು ಸರಿಯಾಗಿ ನಮೂದಿಸದಿದ್ದಲ್ಲಿ ಅಥವಾ ಬೇರೆ ನೋಂದಣಿ ಸಂಖ್ಯೆ, ಸಂಬಂಧವಲ್ಲದ ವಿಷಯಗಳನ್ನು ನಮೂದಿಸಿದರೆ ಅದಕ್ಕೆ ಅಭ್ಯರ್ಥಿಯೇ ಹೊಣೆ. ಅಂತಹ ಪ್ರಕರಣಗಳನ್ನು ವಿಶ್ವವಿದ್ಯಾಲಯ ಸರಿಪಡಿಸಲಾಗುವುದಿಲ್ಲ.**
10. **ಪರೀಕ್ಷಾ ಶುಲ್ಕವನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಗಳನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ ಮತ್ತು ಕೊನೆಯ ದಿನಾಂಕದ ನಂತರ ಬಂದಿರುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.**
11. **ಪರೀಕ್ಷಾ ಶುಲ್ಕದ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸತಕ್ಕದ್ದು.**

17/10/19

**ಕುಲಸಚಿವರು (ಮೌಲ್ಯಮಾಪನ)**
**ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,**
**ಬಳ್ಳಾರಿ.**

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
2. ಮಾನ್ಯ ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
3. ಹಣಕಾಸು ಅಧಿಕಾರಿಗಳು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
4. ಎಲ್ಲ ವಿಭಾಗ/ಘಟಕ ಮುಖ್ಯಸ್ಥರುಗಳು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
5. ಎಲ್ಲಾ ಸಂಯೋಜಿತ ಸ್ನಾತಕ ಮಹಾವಿದ್ಯಾಲಯಗಳ ಪ್ರಾಂಶುಪಾಲರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
6. ಚೀಫ್ ಪೋಸ್ಟ್ ಮಾಸ್ಟರ್ ಆಫ್ ಜನರಲ್, ಕರ್ನಾಟಕ ಸರ್ಕಲ್, ಬೆಂಗಳೂರು-560 001.
7. ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ ಆಫೀಸ್, ಬಳ್ಳಾರಿ ಡಿವಿಷನ್, ಬಳ್ಳಾರಿ-583 001.
8. ಸಬ್ ಪೋಸ್ಟ್ ಮಾಸ್ಟರ್, ಜ್ಞಾನಸಾಗರ ಪೋಸ್ಟ್ ಆಫೀಸ್, ವಿ.ಶ್ರೀ.ಕೃ. ವಿಶ್ವವಿದ್ಯಾಲಯ ಆವರಣ, ವಿನಾಯಕ ನಗರ, ಬಳ್ಳಾರಿ-583 105.
9. ಮೇ// ಲಾಜಿಸಿಸ್, ಬೆಂಗಳೂರು, ಶಾಖೆ ವಿ.ಶ್ರೀ.ಕೃ. ವಿಶ್ವವಿದ್ಯಾಲಯ ಆವರಣ, ಬಳ್ಳಾರಿ.
10. ಕಛೇರಿ ಪ್ರತಿ.